**<u>ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ.ನರಸೀಪುರ.</u>**

**ಸಿಸಿ ಸಂಖ್ಯೆ: 287/2015. ಚಾ.ಸಾ-2. ಪ್ರಾ.ಸಾ-5.**

| | | |
|---|---|---|
| ಹೆಸರು | : | ಶಂಕರನಾರಾಯಣ |
| ತಂದೆಯ ಹೆಸರು | : | ಲೇಟ್ ಕೆ. ಪಾಂಡುರಂಗಪ್ಪ |
| ವಯಸ್ಸು | : | 65 |
| ವೃತ್ತಿ | : | ನಿವೃತ್ತ ನೌಕರ |
| ವಾಸ | : | ಮೈಸೂರು |

ದಿನಾಂಕಃ 15.02.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ನಾನು 2009 ರಿಂದ 2013 ರವರೆಗೆ ಮೈಸೂರಿನ ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಕಚೇರಿಯಲ್ಲಿ ಲೆಕ್ಕ ಪರಿಶೋಧನಾ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನು.

ತಿ. ನರಸೀಪುರ ಪಟ್ಟಣ ಪಂಚಾಯಿತಿಯಲ್ಲಿ ವಾರ್ಷಿಕವಾಗಿ ಲೆಕ್ಕ ಪರಿಶೋದನೆ ಮಾಡಲಾಗುತ್ತಿತ್ತು. ಅದೇ ರೀತಿ 2007-08 ಮತ್ತು 2008-09 ರ ಸಾಲಿನಲ್ಲಿ ಲೆಕ್ಕ ಪರಿಶೋಧನೆ ಮಾಡಲಾಗಿದ್ದು, ಆ ವೇಳೆಗೆ ಹಲವು ಆಕ್ಷೇಪಗಳು ಇದ್ದವು. ಆ ಕುರಿತು ವಿಶೇಷ ಲೆಕ್ಕ ಪರಿಶೋಧನೆ ಮಾಡುವಂತೆ ಮೈಸೂರಿನ ಜಿಲ್ಲಾಧಿಕಾರಿಯ ಕಚೇರಿಯವರಿಂದ ನಮ್ಮ ಲೆಕ್ಕ ಪರಿಶೋಧನ ವರ್ತುಲ ಕಚೇರಿಗೆ ಮಾಹಿತಿ ಬಂದಿತ್ತು.

ಸದರಿ ವಿಶೇಷ ಲೆಕ್ಕ ಪರಿಶೋಧನೆಗೆ ನನ್ನನ್ನು ಮತ್ತು ಚಾಸಾ-3 ರವರನ್ನು ನಿಯೋಜಿಸಲಾಯಿತು. ಅದರಂತೆ ದಿನಾಂಕ 13.08.2009 ಮತ್ತು 14.08.2009 ರಂದು ನಾವು ತಿ. ನರಸೀಪುರ ಪಟ್ಟಣ ಪಂಚಾಯಿತಿಗೆ ಬಂದಿದ್ದ, ಆ ವೇಳೆಗೆ ಚಾಸಾ-1 ರವರು, ನಗದು ಗುಮಾಸ್ತನಾದ 2 ನೇ ಆರೋಪಿತ, ಚಾಸಾ-20 ರವರು ಮತ್ತು ಸಿಬ್ಬಂದಿಗಳು ಇದ್ದರು.

2007-08 ಮತ್ತು 2008-09 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿದ್ದ ಆಕ್ಷೇಪಗಳ ಕುರಿತು ಚಾಸಾ-1 ರವರನ್ನು ವಿಚಾರಿಸಿದೆವು. ಆ ಪಂಚಾಯಿತಿಯಲ್ಲಿ ಕಾಮಗಾರಿಗಳ ಸಂಬಂಧ, ಬೀದಿ ದೀಪ ನಿರ್ವಹಣೆ ಸಂಬಂಧ, ಸ್ವಚ್ಛತೆ ಸಂಬಂಧ, ನೀರು ನಿರ್ವಹಣೆ ಸಂಬಂಧ, ಕಾರ್ಮಿಕರ ನೇಮಕ ಸಂಬಂಧ ಸರಿಯಾಗಿ ಒಚರ್ ಮತ್ತು ಎಂ.ಬಿ. (ಮೆಷರ್‌ಮೆಂಟ್ ಬುಕ್) ಗಳನ್ನು ಸರಿಯಾಗಿ ನಿರ್ವಹಿಸಿದೆ ಇರುವುದು ಕಂಡು ಬಂತು.

2 ನೇ ಆರೋಪಿತ ಯಾವುದೇ ಆದೇಶವಿಲ್ಲದೆ ಸ್ವಂತಕ್ಕೆ ಚೆಕ್‌ನ್ನು ಬರೆದುಕೊಂಡಿರುವುದು ಕಂಡು ಬಂತು. ಅದೇ ರೀತಿ ಅವರು ಅವರ ಹೆಸರಿಗೆ ಕೆಲವು ಚೆಕ್‌ಗಳನ್ನು ಬರೆದಿದ್ದರು. ಪಂಚಾಯಿತಿಯ ಕಾರ್ಮಿಕರ ಸಂಬಂಧ ಅವರ ವಿವರಗಳ ಕುರಿತು ಯಾವುದೇ ಸೂಕ್ತ ದಾಖಲೆಯನ್ನು ಸರಿಯಾಗಿ ನಿರ್ವಹಿಸಿರಲಿಲ್ಲ. ಆ ಪಂಚಾಯಿತಿಯಲ್ಲಿ ನೀರು ನಿರ್ವಹಣೆ ಸಂಬಂಧ ಬಹಳಷ್ಟು ಹಣವನ್ನು ಡ್ರಾ ಮಾಡಿದ್ದು, ಅದಕ್ಕೆ ಸೂಕ್ತ ದಾಖಲೆ ಇರಿಸಿರಲಿಲ್ಲ.

ನಂತರ ನಾವು ವರದಿಯನ್ನು ನಮ್ಮ ಕಚೇರಿಗೆ ಸಲ್ಲಿಸಿರುತ್ತೇವೆ. ಈ ಮೇಲೆ ಹೇಳಿದ ಕೃತ್ಯಗಳಿಂದಾಗಿ ಬಹಳಷ್ಟು ಹಣ ಪೋಲಾಗಿರುವುದು ಕಂಡು ಬಂತು. ಆ ಕುರಿತು ನಾವು ನೀಡಿದ ವರದಿಯಲ್ಲಿ ನಮೂದಿಸಿದ್ದೇವೆ. ಆ ರೀತಿ ಹಣ ಪೋಲಾಗಲು ಈ ಪ್ರಕರಣದ ಆರೋಪಿತರು ಕಾರಣವಾಗಿರುತ್ತಾರೆ. ನಾನು ಘಟನೆಯ ಕುರಿತು ಪೊಲೀಸರಿಗೆ ಹೇಳಿರುತ್ತೇನೆ.

**ಪಾಟೀ ಸವಾಲನ್ನು ಖರ್ಚಿನ ಮೇರೆಗೆ ಮುಂದೂಡಲಾಯಿತು.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಅದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,**
**ತಿ.ನರಸೀಪುರ.**